**ದಿನಾಂಕ:15-12-2023 ರಂದು ಸಾಕ್ಷಿಗೆ ಪ್ರಮಾಣ ವಚನ ಭೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲು ಪ್ರತಿವಾದಿ ಪರ ವಕೀಲರಾದ ಶ್ರೀ ಪಿ.ಎಸ್.ಎ. ರವರಿಂದಃ-**

ದಾವಾ ಸ್ವತ್ತನ್ನು ಖರೀದಿಸುವ ಸಮಯದಲ್ಲಿ ದಾಖಲೆಗಳನ್ನು ಪರಿಶೀಲಿಸಿದಾಗ ಅದು ವ್ಯವಸಾಯದ ಜಮೀನು ಆಗಿತ್ತು ಎಂದರೆ ಸರಿ. ಸದರಿ ಜಮೀನನ್ನು ವ್ಯವಸಾಯೇತರ ಉದ್ದೇಶಕ್ಕಾಗಿ ಉಪಯೋಗಿಸಬಾರದು ಎಂಬ ಷರತ್ತಿರುವುದು ಕಂಡು ಬಂದಿರುತ್ತದೆಯೇ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ನೀವು ದಾವಾ ಸ್ವತ್ತಿನ ಉತಾರವನ್ನು ನೋಡಿಲ್ಲ, ಆದ್ದರಿಂದ ಷರತ್ತು ಇರುವುದು ಗೊತ್ತಿಲ್ಲ ಎಂದರೆ ಸರಿಯಲ್ಲ. ಗೌಡಪ್ಪ ಮತ್ತು ಅಣ್ಣಪ್ಪರವರೊಂದಿಗೆ ಮಾತುಕತೆ ಆದಾಗ ದಾವಾ ಸ್ವತ್ತಿನ ಬಗ್ಗೆ ನಿಮಗೆ ಅದು ಅವರ ಪಿತ್ರಾರ್ಜಿತ ಆಸ್ತಿಯೋ ಅಥವಾ ಬೇರೆ ಆಸ್ತಿಯೋ ಎಂದು ತಿಳಿಯಿತೇ ಎಂದರೆ ಸಾಕ್ಷಿ ಅವರು ಮಾರಾಟಕ್ಕೆ ಇಟ್ಟಿದ್ದರಿಂದ ನಾನು ಅವರೊಂದಿಗೆ ವ್ಯವಹಾರ ಮಾಡಿದ್ದೇನೆ ಎನ್ನುತ್ತಾರೆ. ದಾವಾ ಸ್ವತ್ತಿಗೆ ಖುದ್ದಾಗಿ ಭೇಟಿ ನೀಡಿ ಅಕ್ಕಪಕ್ಕದವರೊಂದಿಗೆ ಸದರಿ ಸ್ವತ್ತು ಗೌಡಪ್ಪ ಮತ್ತು ಅಣ್ಣಪ್ಪ ರವರಿಗೆ ಹೇಗೆ ಬಂತು ಮತ್ತು ಅವರು ಅದರ ಮಾಲೀಕರು ಹೌದೋ ಅಲ್ಲವೋ ಎಂದು ವಿಚಾರಿಸಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ನಾನು ಉತಾರ ನೋಡಿದಾಗ ಒಟ್ಟು ಕ್ಷೇತ್ರ 21 ಗುಂಟೆ ಇತ್ತು ಎನ್ನುತ್ತಾರೆ. ಖರೀದಿ ಪತ್ರ ಬರೆಸಿಕೊಳ್ಳುವ ಎಷ್ಟು ದಿನಗಳ ಮುಂಚೆ ಉತಾರವನ್ನು ನೋಡಿದ್ದೀರಿ ಎಂದರೆ ಸಾಕ್ಷಿ 15 ದಿನಗಳ ಹಿಂದೆ ನೋಡಿರಬಹುದು ಎನ್ನುತ್ತಾರೆ. 21 ಗುಂಟೆ ಗೌಡಪ್ಪ ಮತ್ತು ಅಣ್ಣಪ್ಪ ರವರ ಕಬ್ಜೆಯಲ್ಲಿ ಇದೆಯೋ ಇಲ್ಲವೋ ಎಂದು ತಿಳಿದುಕೊಂಡಿರುತ್ತೇನೆ. ನಾನು ವಿಚಾರ ಮಾಡಿದಾಗ ಗೌಡಪ್ಪ ಮತ್ತು ಅಣ್ಣಪ್ಪ ರವರೇ 21 ಗುಂಟೆ ಕಬ್ಜೆಯಲ್ಲಿದ್ದಾರೆ ಎಂದು ತಿಳಿದು ಬಂತು.

**2.** ಸರ್ವೆ ನಂ.121/10 ರಲ್ಲಿ ಎಷ್ಟು ಕ್ಷೇತ್ರ ಉಳುಮೆ ಮಾಡಲು ಯೋಗ್ಯವಾಗಿತ್ತು ಎಂದರೆ ಸಾಕ್ಷಿ ಅಲ್ಲಿ ಯಾವುದೇ ಉಳುಮೆ ಮಾಡುವ ಜಮೀನು ಇರಲಿಲ್ಲ , ಅಲ್ಲಲ್ಲಿ ಮನೆಗಳನ್ನು ಕಟ್ಟಿದ್ದರು ಎನ್ನುತ್ತಾರೆ. ಒಟ್ಟು 21 ಗುಂಟೆ ಜಮೀನಿನ ಚೆಕ್ಕುಬಂಧಿ ಉತ್ತರಕ್ಕೆ ಮಕ್ತುಮು ಸಾಬ್ ಜಮಾದಾರ್ ರವರ ಮನೆ, ದಕ್ಷಿಣಕ್ಕೆ ಶಂಕರ್ ಚೌಬಾರಿ ರವರ ಮನೆ , ಪೂರ್ವಕ್ಕೆ ಸಾರ್ವಜನಿಕ ರಸ್ತೆ, ಪಶ್ಚಿಮಕ್ಕೆ ನಾನು ಖರೀದಿಸಿ ಉಳಿದ ಜಾಗ. ಬೆಳಗಾವಿಯಲ್ಲಿ ಸಾಮಾನ್ಯವಾಗಿ ಮೇ-ಜೂನ್ ತಿಂಗಳಲ್ಲಿ ಮಳೆ ಶುರುವಾಗುತ್ತದೆ ಎಂದರೆ ಸರಿ. ನೀವು ಜಮೀನನ್ನು ಖರೀದಿಸುವ ಮುನ್ನ ನೋಡಲು ಹೋದಾಗ ರೈತರು ಜಮೀನಿನ ಉಳುಮೆ ತಯಾರಿ ಮಾಡಿಕೊಳ್ಳುತ್ತಿದ್ದರೇ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ಖರೀದಿಸುವ ಮೊದಲು ಸದರಿ ಸ್ವತ್ತು ಎನ್.ಎ ಆಗಿದೆಯೇ ಇಲ್ಲವೋ ಎಂದು ತಿಳಿದುಕೊಳ್ಳಲು ಅಕ್ಕಪಕ್ಕದವರನ್ನು ವಿಚಾರಿಸಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ, ಸಾಕ್ಷಿ ಮುಂದುವರೆದು ಎಲ್ಲಾ ಕಡೆ ಮನೆ ಆಗಿದ್ದರಿಂದ ನಾನು ವಿಚಾರಿಸಲಿಲ್ಲ ಎನ್ನುತ್ತಾರೆ. ಅಕ್ಕ ಪಕ್ಕ ಇರುವ ಮನೆಗಳ ವಿಪಿಸಿ ಸಂಖ್ಯೆಗಳನ್ನು ತಿಳಿದುಕೊಳ್ಳಲು ಗ್ರಾಮ ಪಂಚಾಯಿತಿಯಲ್ಲಿ ವಿಚಾರಿಸಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ಗೌಡಪ್ಪ ಮತ್ತು ಅಣ್ಣಪ್ಪ ರವರನ್ನು ಸದರಿ ಸ್ವತ್ತು ಎನ್ .ಎ ಆಗಿದೆಯೇ ಇಲ್ಲವೋ ಎಂದು ವಿಚಾರಿಸಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ಸಾಕ್ಷಿಯು ಮುಂದುವರೆದು ಎಲ್ಲಾ ಕಡೆ ಮನೆ ಆಗಿದ್ದರಿಂದ ವಿಚಾರಿಸುವ ಪ್ರಶ್ನೆ ಬರಲಿಲ್ಲ ಎನ್ನುತ್ತಾರೆ. ಮನೆಗಳು ಆಗಿದ್ದರಿಂದ ನಿಮ್ಮ ಮಾರಾಟಗಾರರಾದ ಗೌಡಪ್ಪ ಮತ್ತು ಅಣ್ಣಪ್ಪ ರವರ ಬಳಿ 5 ಗುಂಟೆ ಜಾಗ ಉಳಿದಿದೆಯೋ ಇಲ್ಲವೋ ಎಂದು ವಿಚಾರಿಸಿದ್ದೀರಾ ಎಂದರೆ ಸಾಕ್ಷಿ ವಿಚಾರಿಸಿದ್ದೇನೆ ಎನ್ನುತ್ತಾರೆ.

**3.** ನಾನು 2003 ರಿಂದ ಬೆಳಗಾವಿಯ ಹಳೇಗಾಂಧಿ ನಗರದಲ್ಲಿ ವಾಸವಾಗಿದ್ದೇನೆ . ನಾನು ಸರ್ಕಾರಿ ಶಿಕ್ಷಣ ಇಲಾಖೆಯಲ್ಲಿ ನೌಕರಿ ಮಾಡುತ್ತಿದ್ದೆ . ನಾನು ಸಹಶಿಕ್ಷಕನಾಗಿ ಕೆಲಸ ಮಾಡುತ್ತಿದ್ದೆ. ನನಗೆ ಸ್ವಂತ ಬ್ಯಾಂಕ್ ಖಾತೆ ಇದೆ. ಸಾಮಾನ್ಯವಾಗಿ ಖರೀದಿ ವ್ಯವಹಾರ ಮಾಡುವಾಗ ಚೆಕ್ ಅಥವಾ ಡಿ.ಡಿ ಮೂಲಕ ಮಾಡಬೇಕೆಂಬ ಮಾಹಿತಿ ನಿಮಗೆ ಇತ್ತು ಎಂದರೆ ಸರಿ. ಗೌಡಪ್ಪ ಮತ್ತು ಅಣ್ಣಪ್ಪ ರವರು ಸದರಿ ಜಮೀನನ್ನು ಮಾರಾಟ ಮಾಡುವ ವಿಷಯ ನಿಮಗೆ ಹೇಗೆ ಗೊತ್ತಾಯಿತು ಎಂದರೆ ಸಾಕ್ಷಿ ನನ್ನ ಮೂಲ ಊರು ಪಂಥ್ ಬಾಳಕುಂದ್ರಿ ಆಗಿದ್ದರಿಂದ ನನಗೆ ಮಾರಾಟ ಮಾಡುವ ವಿಷಯ ನನಗೆ ಜನರಿಂದ ತಿಳಿಯಿತು ಎನ್ನುತ್ತಾರೆ. ನನ್ನ ಮತ್ತು ಗೌಡಪ್ಪ ಮತ್ತು ಅಣ್ಣಪ್ಪ ರವರ ನಡುವೆ ಮಾತುಕತೆ ಅವರ ಮನೆಯಲ್ಲಿ ಆಯಿತು. ಗೌಡಪ್ಪ ಮತ್ತು ಅಣ್ಣಪ್ಪ ರವರ ಮಕ್ಕಳು ಚಿಕ್ಕವರಿದ್ದರು . ನಾನು ಗೌಡಪ್ಪ ಮತ್ತು ಅಣ್ಣಪ್ಪ ರವರ ಮನೆಗೆ ಹೋಗಿಲ್ಲ , ಆದರೂ ಸಹ ಅವರ ಮನೆಗೆ ಹೋಗಿ ಅವರೊಂದಿಗೆ ವ್ಯವಹಾರದ ಮಾತುಕತೆ ಆಗಿದೆ ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ . ಮಾತುಕತೆ ಆದ ನಂತರ ಯಾವುದೇ ಕಾಗದ ಪತ್ರಗಳನ್ನು ಬರೆಯಲಾಯಿತೇ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ಸಾಕ್ಷಿಯು ಮುಂದುವರೆದು ಶನಿವಾರ ಕೂಟದಲ್ಲಿ ಖರೀದಿ ಪತ್ರ ಬರೆದುಕೊಟ್ಟಿರುತ್ತಾರೆ ಎನ್ನುತ್ತಾರೆ. ಮಾತುಕತೆಯಾದ ನಂತರ ಎಷ್ಟು ದಿನಗಳಲ್ಲಿ ಖರೀದಿ ಪತ್ರ ಬರೆಯಲಾಯಿತು ಎಂದರೆ ಸಾಕ್ಷಿ 4-5 ದಿನಗಳಲ್ಲಿ ಬರೆಯಲಾಯಿತು ಎನ್ನುತ್ತಾರೆ. ನಾನು 2001 ಸೆಪ್ಟೆಂಬರ್ ತಿಂಗಳಲ್ಲಿ ನಿವೃತ್ತಿ ಹೊಂದಿದ್ದೇನೆ . ನನಗೆ ನಿವೃತ್ತಿ ವೇತನ ಬಂದಿತ್ತು. ಅದನ್ನು ಬ್ಯಾಂಕಿನಲ್ಲಿ ಇಟ್ಟು ಉಪಯೋಗಿಸುತ್ತಿದ್ದೆ . ಮಾತುಕತೆಯಾದ ಮತ್ತು ಖರೀದಿ ಪತ್ರವಾದ ದಿನಗಳ ನಡುವೆ ನೀವು ಪಂಥ್ ಬಾಳೆಕುಂದ್ರಿಗೆ ಹೋಗಿದ್ದೀರಾ ಎಂದರೆ ಸಾಕ್ಷಿ ಇಲ್ಲ

ಎನ್ನುತ್ತಾರೆ. ಖರೀದಿ ಪತ್ರವಾದ ಎಷ್ಟು ದಿನಗಳ ನಂತರ ನಿಮ್ಮ ಊರಿಗೆ ಹೋಗಿದ್ದೀರಿ ಎಂದರೆ ಸಾಕ್ಷಿ ಹೋಗಿ ಬಂದು ಮಾಡುತ್ತಿದ್ದೆ ಎನ್ನುತ್ತಾರೆ.

**4.** ನಿಮ್ಮ ಊರಿನಲ್ಲಿ ನಿಮಗೆ ಸೇರಿದ ಮನೆ ಇದೆಯೇ ಎಂದರೆ ಸಾಕ್ಷಿ ನಮ್ಮ ಅಣ್ಣ ತಮ್ಮಂದಿರ ಮನೆ ಇದೆ ಎನ್ನುತ್ತಾರೆ. ನಮ್ಮ ಜಮೀನು ಸಹ ನಮ್ಮ ಅಣ್ಣ ತಮ್ಮಂದಿರ ಕಬ್ಜೆಯಲ್ಲಿದೆ. ನೀವು ಅದೇ ಊರಿನವರಾಗಿರುವುದರಿಂದ ದಾವಾ ಸ್ವತ್ತು ಗೌಡಪ್ಪ ಮತ್ತು ಅಣ್ಣಪ್ಪ ರವರ ಸ್ವಂತ ಆಸ್ತಿಯೋ ಅಥವಾ ಪಿತ್ರಾರ್ಜಿತ ಆಸ್ತಿಯೋ ಎಂದು ನಿಮಗೆ ಮಾಹಿತಿ ಇತ್ತು ಎಂದರೆ ಸರಿ. ಸದರಿ ಆಸ್ತಿಯಲ್ಲಿ ಯಾರ ಯಾರ ಹಿಸ್ಸೆ ಇತ್ತು ಎಂದು ಮಾಹಿತಿ ಇತ್ತೇ ಎಂದರೆ ಸಾಕ್ಷಿ ಅವರ ಅಣ್ಣ ತಮ್ಮಂದಿರ ಹಿಸ್ಸೆಯ ಬಗ್ಗೆ ನನಗೆ ಗೊತ್ತಿರಲಿಲ್ಲ ಎನ್ನುತ್ತಾರೆ. ನಾವು ಅದೇ ಊರಿನವರಾಗಿದ್ದರಿಂದ ದಾವಾ ಸ್ವತ್ತು ಒಳ್ಳೆಯ ಆಸ್ತಿ, ಅದನ್ನು ಲಪಟಾಯಿಸಬೇಕೆಂಬ ಉದ್ದೇಶದಿಂದ ಸುಳ್ಳು ಕಾಗದ ಪತ್ರ ತಯಾರಿಸಿಕೊಂಡಿದ್ದೇನೆ ಎಂದರೆ ಸರಿಯಲ್ಲ.

**5.** ನಿಮ್ಮ ಊರಿನಲ್ಲಿ ಮಜೀದ್ ಮುಲ್ಲಾ ಇದ್ದರು ಎಂದರೆ ನನಗೆ ಗೊತ್ತಿಲ್ಲ. ಮಜೀದ್ ಮುಲ್ಲಾ ರವರು ಗ್ರಾಮ ಪಂಚಾಯಿತಿ ಸದಸ್ಯರು ಮತ್ತು ಅಧ್ಯಕ್ಷರು ಆಗಿದ್ದರು ಎಂದರೆ ನನಗೆ ಗೊತ್ತಿಲ್ಲ. ಅವರು ನಮ್ಮ ಹತ್ತಿರದ ಸಂಬಂಧಿ ಎಂದರೆ ಸರಿಯಲ್ಲ. ಅವರ ವಿರುದ್ಧ ಮಾರಿಹಾಳ ಪೊಲೀಸ್ ಠಾಣೆಯಲ್ಲಿ ಹಲವಾರು ಪ್ರಕರಣಗಳು ದಾಖಲಾಗಿದ್ದವು ಎಂದರೆ ನನಗೆ ಗೊತ್ತಿಲ್ಲ. ಅವರು ನಿಮ್ಮ ಸಂಬಂಧಿಕರಾಗಿರುವ ಕಾರಣ ಅವರ ಸಹಾಯದಿಂದ ಗ್ರಾಮ ಪಂಚಾಯಿತಿ ಉತಾರಗಳಲ್ಲಿ ನನ್ನ ಹೆಸರನ್ನು ಯಾವುದೇ ಆಧಾರ ಇಲ್ಲದೆ ನಮೂದಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಯಾವ ಆಧಾರದ ಮೇಲೆ ನಿಮ್ಮ ಹೆಸರು ಉತಾರದಲ್ಲಿ ನಮೂದಾಗಿದೆ ಎಂದು ತೋರಿಸಲು ಗ್ರಾಮ ಪಂಚಾಯಿತಿಯಿಂದ ಆದ ಠರಾವನ್ನು ಹಾಜರುಪಡಿಸಿಲ್ಲ ಎಂದರೆ ಸರಿ. ಯಾವುದೇ ಜಾಗಕ್ಕೆ ಗ್ರಾಮ ಪಂಚಾಯಿತಿಯಿಂದ ಉತಾರ ನೀಡಲು ಆ ಜಾಗ ಎನ್.ಎ

ಆಗಬೇಕು, ಲೇ ಔಟ್ ಆದ ನಂತರ ಗ್ರಾಮ ಪಂಚಾಯಿತಿಯ ಉತಾರದಲ್ಲಿ ಹೆಸರು ನಮೂದಿಸಲಾಗುತ್ತದೆ ಎಂದರೆ ಸರಿ.

**6.** ಈ ದಾವೆ ಹೂಡುವ ಸಮಯದಲ್ಲಿ ಸರ್ವೆ ನಂ.121/10 ಎಷ್ಟು ವಿಭಾಗಗಳಾಗಿತ್ತು ಮತ್ತು ಯಾರ ಯಾರ ಹಿಸ್ಸೆಗೆ ಹೋಗಿತ್ತು ಎಂದು ವಾದ ಪತ್ರದಲ್ಲಿ ನಮೂದಿಸಿಲ್ಲ ಎಂದರೆ ಸಾಕ್ಷಿ ನನಗೆ ಖರೀದಿಗೆ ಕೊಟ್ಟ ಸ್ವತ್ತು ಮಾತ್ರ ನನ್ನ ಹಿಸ್ಸೆಗೆ ಬಂದಿದೆ ಎನ್ನುತ್ತಾರೆ. ದಾವಾ ಹೂಡುವ ಸಮಯದಲ್ಲಿ ಸರ್ವೆ ನಂ.121/10 ರಲ್ಲಿ 5 ಗುಂಟೆ ಜಾಗ ಇರಲಿಲ್ಲ ಎಂದರೆ ಸರಿಯಲ್ಲ. ದಾವೆ ಹೂಡುವ ಸಮಯದಲ್ಲಿ ಸರ್ವೆ ನಂ.121/10 ರಲ್ಲಿ ವಿಂಗಡಣೆಯಾಗಿ ಬೇರೆ ನಂಬರ್ ಗಳನ್ನು ಕೊಡಲಾಗಿತ್ತು ಎಂದರೆ ಸರಿಯಲ್ಲ. ಸರ್ವೆ ನಂ.121/10 ರಲ್ಲಿ ವಿಂಗಡಣೆಯಾಗಿ ಹಿಸ್ಸೆಗಳಾದ ಬಗ್ಗೆ ಈದಿನಗಳವರೆಗೂ ನಾನು ಯಾವುದೇ ಕಂದಾಯ ಇಲಾಖೆಯಲ್ಲಿ ಪ್ರಶ್ನಿಸಿಲ್ಲ ಎಂದರೆ ಸರಿಯಲ್ಲ. ಸರ್ವೆ ನಂ.121/10 ಅಣ್ಣಪ್ಪ ಮತ್ತು ಗೌಡಪ್ಪ ರವರ ಮಾಲೀಕತ್ವದಲ್ಲಿ ಇತ್ತು ಎಂದು ತೋರಿಸಲು ಯಾವುದೇ ದಾಖಲೆಗಳನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ಸರ್ವೆ ನಂ.121/10 ರಲ್ಲಿನ 5 ಗುಂಟೆಗೆ ವಿಪಿಸಿ ನಂಬರ್ ಕೊಟ್ಟಿದ್ದಾರೆ ಎಂದು ತೋರಿಸಲು ಪಂಚಾಯಿತಿಯಿಂದ ಬೇರೆ ದಾಖಲೆಗಳನ್ನು ಹಾಜರುಪಡಿಸಿಲ್ಲ ಎಂದರೆ ಸಾಕ್ಷಿ ಉತಾರವನ್ನು ಹೊರತುಪಡಿಸಿ ಬೇರೆ ದಾಖಲೆಗಳು ಇಲ್ಲ, ಆದ್ದರಿಂದ ಹಾಜರುಪಡಿಸಿಲ್ಲ ಎನ್ನುತ್ತಾರೆ. ಅಸಲು ದಾವಾ ಸಂಖ್ಯೆ 781/2018 ರ ಡಿಕ್ರಿಯನ್ನು ಈ ದಿನದವರೆಗೂ ಯಾವುದೇ ನ್ಯಾಯಾಲಯದಲ್ಲಿ ಪ್ರಶ್ನಿಸಿಲ್ಲ ಎಂದರೆ ಸರಿ, ಸಾಕ್ಷಿ ಆದ್ದರಿಂದಲೇ ನಾನು ಈ ದಾವೆಯನ್ನು ಹೂಡಿದ್ದೇನೆ ಎನ್ನುತ್ತಾರೆ.

**7.** ಸಾಕ್ಷಿಗೆ ಎರಡು ಪೋಟೋಗಳನ್ನು ತೋರಿಸಿ ಇದೇ ನೀವು ಹೇಳುವ ಚೆಕ್ಕುಬಂಧಿಯಲ್ಲಿರುವ ಸ್ವತ್ತು ಎಂದರೆ ಸರಿಯಲ್ಲ ಎನ್ನುತ್ತಾರೆ. ಸಾಕ್ಷಿಗೆ ಇನ್ನೊಂದು ಪೋಟೋ

ತೋರಿಸಿ ಅದರಲ್ಲಿರುವ ವ್ಯಕ್ತಿಗಳನ್ನು ಗುರುತಿಸುತ್ತೀರಾ ಎಂದರೆ ಸಾಕ್ಷಿ ನನಗೆ ಕಣ್ಣು ಸರಿಯಾಗಿ ಕಾಣಿಸುವುದಿಲ್ಲ, ಆದ್ದರಿಂದ ಗುರುತಿಸಲಾಗುವುದಿಲ್ಲ ಎನ್ನುತ್ತಾರೆ. ಸಾಕ್ಷಿಗೆ ಇನ್ನೊಂದು ಪೋಟೋ ತೋರಿಸಿ ಅದರಲ್ಲಿ ಹೊಲಕ್ಕೆ ಹೊಂದಿಕೊಂಡಂತೆ ಇರುವ ಮನೆಗಳು ಯಾರಿಗೆ ಸೇರಿದವು ಎಂದರೆ ಸಾಕ್ಷಿ ನನಗೆ ಹೇಳಲಾಗುವುದಿಲ್ಲ ಎನ್ನುತ್ತಾರೆ. ಮಜೀದ್ ಮುಲ್ಲಾ ರವರ ಸಹಾಯದಿಂದ ಖೊಟ್ಟಿ ಕಾಗದವನ್ನು ತಯಾರಿಸಿ ಸುಳ್ಳು ದಾವೆ ಹೂಡಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಇವತ್ತಿನವರೆಗೂ ಪ್ರತಿವಾದಿಗಳು ಸರ್ವೆ ನಂ.121/11 ರಿಂದ 121/14 ರಲ್ಲಿ ಉಳುಮೆ ಮಾಡುತ್ತಾರೆ ಎಂದರೆ ಸರಿಯಲ್ಲ . ಸಾಕ್ಷಿಯು ಮುಂದುವರೆದು ಸರ್ವೆ ನಂ.121 ರಲ್ಲಿ 11 ಹಿಸ್ಸೆಗಳು ಮಾತ್ರ ಇದ್ದು ಆ ಬಗ್ಗೆ ನಾನು ಪಿಟಿ ಶೀಟನ್ನು ಹಾಜರುಪಡಿಸಿದ್ದೇನೆ, ಸರ್ವೆ ನಂ.121/12 ರಿಂದ 121/14 ಹಿಸ್ಸೆಗಳು ಇಲ್ಲ ಎನ್ನುತ್ತಾರೆ. ಸಾಕ್ಷಿಗೆ ಸರ್ವೆ ನಂ.121/12 ರಿಂದ 121/15 ರ ಉತಾರ ಮತ್ತು ಪಿಟಿ ಶೀಟಗಳನ್ನು ತೋರಿಸಲಾಗಿ ಅವುಗಳು ಸುಳ್ಳು ಇವೆ ಎನ್ನುತ್ತಾರೆ. ಸರ್ವೆ ನಂ.121/10 ನಾನು ದಾವೆ ಹೂಡಿದ ದಿನದಂದು ಅಸ್ಥಿತ್ವದಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

**(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ.ಹೇ.ಕೇ ಸರಿಯಿದೆ.**

**Sd/-**

**3 ನೇ ಹೆಚ್ಚುವರಿ ಸಿವಿಲ್ ಮತ್ತು ಜೆಎಂಎಫ್‌ಸಿ ನ್ಯಾಯಾಧೀಶರು,**
**ಬೆಳಗಾವಿ.**